ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 3 ನೇ ಪ್ರತಿವಾದಿ ಪರ ವಕೀಲರಿಂದಃ-

ಪ್ರಸ್ತುತ ದಾವೆಯನ್ನು ವಾದಿಯರು ಮಾತ್ರ ಮಾಡಿರುತ್ತಾರೆ ಎಂರೆ ಸಾಕ್ಷಿ ನಾನು ಸಹ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ನಿಮ್ಮ ತಂದೆ ಜೀವಂತ ಇದ್ದು ಅವರನ್ನು ಸಹ ಪಕ್ಷಗಾರರನ್ನಾಗಿ ಮಾಡಿರುತ್ತಾರೆ ಎಂದರೆ ಸರಿ. ಈ ಹಿಂದೆ ನಮ್ಮ ತಂದೆಯವರು ಸಹ ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆಯರು ಲಿಖಿತ ಹೇಳಿಕೆ ಸಲ್ಲಿಸಿದ್ದರೂ ಸಹ ಸಲ್ಲಿಸಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತಮ್ಮ ಲಿಖಿತ ಹೇಳಿಕೆಯಲ್ಲಿ ದಾವಾ ಆಸ್ತಿಗಳು ಎಲ್ಲಾ ಅವರ ತಾಯಿಯ ಸ್ವಯಾರ್ಜಿತ ಆಸ್ತಿ ಎಂದು ಹೇಳಿ ಬರೆಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನಿಮ್ಮ ಅಜ್ಜಿಯಾದ ದೇವಮ್ಮರವರ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿ. ನಿಮ್ಮ ಅಜ್ಜಿ ಜೀವಂತ ಇದ್ದಾಗ ದಿನಾಂಕ 20.05.1979 ರಲ್ಲಿ ತನ್ನ ಇಬ್ಬರು ಗಂಡು ಮಕ್ಕಳ ಗಂಡು ಮಕ್ಕಳಿಗೆ ದಾವಾ ಆಸ್ತಿಗಳನ್ನು ಈಗಾಗಲೇ ವಿಭಾಗ ಮಾಡಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಬೋಗೇಂದ್ರಪ್ಪ ಮತ್ತು ಸತೀಶ್ ಕುಮಾರ್ ಎನ್ನುವವರು ಸಿ.ಪಿ. ಸಿದ್ದರಾಜುರವರ ಮಕ್ಕಳು ಎಂದರೆ ಸರಿ. ಸದರಿಯವರಿಗೆ ಸರ್ವೇ ನಂಬರ್ 233 ರಲ್ಲಿ 2 ಎಕರೆ 14 ವರೆ ಗುಂಟೆ ಮತ್ತು ಸರ್ವೇ ನಂಬರ್ 67 ರಲ್ಲಿ 1 ಎಕರೆ 10 ಗುಂಟೆ ವಿಭಾಗದ ಮೂಲಕ ಕೊಟ್ಟಿರುತ್ತಾರೆ

ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳಲ್ಲಿ ಬೋಗೇಂದ್ರಪ್ಪ ಮತ್ತು ಸತೀಶ್ ಕುಮಾರ್ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರದಂತೆ 1 ನೇ ಪ್ರತಿವಾದಿಯ ಮಗನಾದ 3 ನೇ ಪ್ರತಿವಾದಿಗೆ ಸರ್ವೇ ನಂಬರ್ 233 ರಲ್ಲಿ 2 ಎಕರೆ 14 ವರೆ ಗುಂಟೆ ಮತ್ತು ಸರ್ವೇ ನಂಬರ್ 165/1 ರಲ್ಲಿ 31 ಗುಂಟೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳು ಸದರಿ ಸ್ವತ್ತುಗಳಿಗೆ ಸಂಬಂಧಿಸಿದಂತೆ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಅದೇ ವಿಭಾಗದಲ್ಲಿ ದಾವಾ ಐಟಂ-3 ರ ಸ್ವತ್ತನ್ನು 1 ನೇ ಪ್ರತಿವಾದಿಗೆ ಕೊಟ್ಟಿರುತ್ತಾರೆ ಎಂದರೆ ಸರಿ. ದಿನಾಂಕ 20.05.1979 ರ ವಿಭಾಗ ಪತ್ರದ ಪ್ರಕಾರ 3 ನೇ ಪ್ರತಿವಾದಿಯವರ ಭಾಗಕ್ಕೆ ಬಂದ ಸ್ವತ್ತುಗಳಲ್ಲಿ ಅವರೇ ಸ್ವಾಧೀನದಲ್ಲಿ ಇದ್ದು ವ್ಯವಸಾಯ ಮಾಡಿಕೊಂಡು ಬರುತ್ತಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ 3 ನೇ ಪ್ರತಿವಾದಿರವರೇ ಕಂದಾಯ ಪಾವತಿ ಮಾಡಿಕೊಂಡು ಹೋಗುತ್ತಿರುತ್ತಾರೆ ಎಂದರೆ ಸರಿಯಲ್ಲ.

ಈ ಹಿಂದೆ ನಾನು, ನನ್ನ ಅಕ್ಕ ಭಾಗ್ಯಮ್ಮ 3 ನೇ ಪ್ರತಿವಾದಿ ಮತ್ತು ವಾದಿಯರು ಸೇರಿ ಪ್ರಸ್ತುತ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಓ.ಎಸ್. 295/2008 ರಂತೆ ದಾವೆ ಸಲ್ಲಿಸಿ ಭಾಗ ಕೇಳಿರುತ್ತೇವೆ ಎಂದರೆ ಸರಿ. ಆ ದಾವೆಯಲ್ಲೂ ಸಹ ಈ ದಾವೆಯ 1 ನೇ ಪ್ರತಿವಾದಿರವರು ಲಿಖಿತ ಹೇಳಿಕೆಯ ಸಲ್ಲಿಸಿದ್ದರೂ ಎಂದರೆ ಸಾಕ್ಷಿ ಸಲ್ಲಿಸಿರಲಿಲ್ಲ ಎಂದು ನುಡಿಯುತ್ತಾರೆ. ಓ.ಎಸ್. 295/2008 ರ ದಾವೆಯು ದಿನಾಂಕ 14.03.2011 ರಂದು ವಜಾಗೊಂಡಿರುತ್ತದೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಓ.ಎಸ್. 295/2008 ರ ದಾವೆ ವಜಾ ಆಗಿದ್ದರೂ ಸಹ ನನ್ನ ಸಹೋರಿಯಾದ ವಾದಿಗಳನ್ನು ಎತ್ತಿಕಟ್ಟಿ 10

ವರ್ಷಗಳ ನಂತರ ಪ್ರಸ್ತು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೂ ಮತ್ತು ನನಗೂ ಯಾವುದೇ ಹಕ್ಕು ಬಾದ್ಯತೆ ಮತ್ತು ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಭಾಗಕ್ಕೆ ಬಂದ ದಾವಾ ಐಟಂ-3 ರ ಸ್ವತ್ತಿನಲ್ಲಿ ಮಾತ್ರ ನನಗೆ ಹಕ್ಕು ಇರುತ್ತದೆ ಬೇರೆ ಆಸ್ತಿಗಳಲ್ಲಿ ನಮಗೆ ಯಾವುದೇ ಹಕ್ಕು ಎಂದರೆ ಸರಿಯಲ್ಲ. ದಾವಾಐಟಂ-1 ಮತ್ತು 2 ರಲ್ಲಿ ನಮಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.